

ಬಂದು ಅಟ್ಯಾಕ್ ಮಾಡುವ ಪ್ಲಾನು ಅವಳದಾಗಿತ್ತು. ಆಕೆ ತನಗಾಗಿ ನಿಗದಿಪಡಿಸಿಕೊಂಡಿದ್ದು ಎರಡು ಕರುಗಳನ್ನು. ಕಾಡುಕೋಣಗಳ ನಿರೀಕ್ಷೆಗೆ ವ್ಯತಿರಿಕ್ತವಾಗಿ ಹಿಂಬದಿಯಿಂದ ರಭಸವಾಗಿ ನುಗ್ಗಿದ ರಾಣಿ ಮಿಂಚಿನಂತೆ ಒಂದು ಕಾಡುಕೋಣದ ಕರುವನ್ನು ಎಳೆದುಕೊಂಡು ಕಾಡಿನೊಳಗೆ ಮರೆಯಾದಳು. ಈ ಘಟನೆಯನ್ನು ನೋಡಲು ಸಾಧ್ಯವಾಯಿತೇ ಹೊರತು ಚಿತ್ರ ತೆಗೆಯಲು ಆಗಲಿಲ್ಲ. ಆಕೆ ದಾಳಿ ಮಾಡಿದ ವೇಗಕ್ಕೆ ಕಾಡುಕೋಣಗಳು ಹೆದರಿ ಚೆಲ್ಲಾಪಿಲ್ಲಿಯಾಗಿ ದೂಳು ಎದ್ದಿತು. ಕಾಡುಕೊಣಗಳಿಗೆ ಎಲ್ಲಿ ಏನಾಯಿತು? ಎಂದು ಗೊತ್ತಾಗುವುದರೊಳಗೆ ಎಲ್ಲವೂ ಮುಗಿದಿತ್ತು. ರಾಣಿ ಕಾಡಿನೊಳಗೆ ಎಳೆದುಕೊಂಡು ಹೋದ ಕರು ಕೆಲ ಕ್ಷಣ ಕೂಗಿ ಆಮೇಲೆ ಸುಮ್ಮನಾಯಿತು. ಅಲ್ಲೇ ಮುಂದಿನ ನಾಲೆಯಲ್ಲಿ ರಾಣಿಯ ಮೂವರು ಮಕ್ಕಳಿರುವುದು ನಮಗೆ ಗೊತ್ತಿತ್ತು. ಇವತ್ತು ಅವುಗಳಿಗೆ ಅಮ್ಮನಿಂದ ಹಬ್ಬದೂಟವಿದೆ ಎಂದುಕೊಂಡು ಹಿಂತಿರುಗಿದೆವು.

ಚಿರತೆಯೋ ಹುಲಿಯೋ ಗೊತ್ತಿಲ್ಲ, ಕಾಡು ಯಥಾಪ್ರಕಾರ ಶಬ್ದ ಮಾಡಿತು. ಆ ದಾರಿಯಲ್ಲಿ ಹೊರಟ್ಟಿದ್ದ ಜಿಂಕೆಗಳು ಹೆದರಿ ಓಡಿಬಂದವು. ಲಂಗೂರ್ ಕೂಗುತ್ತಲೇ ಇತ್ತು. ಇದು ಖಚಿತವಾಗಿ ನಮಗೆ ಬೇಕಾದ ಪ್ರಾಣಿಯೇ ಇರಬೇಕು ಎಂದು ಕೊಂಚ ಹೊತ್ತು ಅಲ್ಲೇ ಕಾದೆವು. ಮಾತಾಡದೆ ಉಸಿರಾಟ ಮಾತ್ರ ಕೇಳುವಷ್ಟು ಮೌನವಾದೆವು. ಕೆಲವೇ ಕ್ಷಣದಲ್ಲಿ ಅದೇ ದಿಕ್ಕಿನಿಂದ ಹಂದಿಯೊಂದು ಭರಭರನೇ ಓಡಿ ಬಂದಿತು. ಏದುಸಿರು ಬಿಡುತ್ತಾ ತಾನು ನೆಗೆದು ಬಂದ ದಾರಿಯ ಕಡೆಗೆ ಭಯಭೀತವಾಗಿ ನೋಡತೊಡಗಿತು. ಹಂದಿಯ ಹಿಂದೆ ಯಾವುದೋ ಬೇಟೆಗಾರ ಬಿದ್ದಿರುವುದು ನಿಜ. ಹಂದಿಗೊಂದು ಗತಿ ಕಾಣಿಸಲು ಪೊದೆಯ ಅಂಚಿನಿಂದ ನೆಗೆದು ಬರಬಹುದಾದ ಪ್ರಾಣಿ ನಿರೀಕ್ಷಿಸಿ ಕೂತೆವು. ಕ್ಯಾಮೆರಾ ಕಣ್ಣು ಕೀಲಿಸಿಕೊಂಡು ಸಿದ್ಧವಾಗಿದ್ದವು. ಸೆಟೆದು ನಿಂತಿದ್ದ ಗಂಡು ಹಂದಿಯ ಕೋರೆ ಹಲ್ಲು ಮುರಿದಂತೆ ಕಂಡಿತು, ಇದು ಮೊದಲೇ ಆಗಿರಬಹುದು. ತನ್ನ ಪ್ರಬಲ ಅಸ್ತ್ರವಾದ ದಂತಪಂಕ್ತಿಯನ್ನೇ ಕಳಕೊಂಡ ಹಂದಿಗೆ ತನ್ನ ಅಮೂಲ್ಯ ಜೀವ ಉಳಿಸಿಕೊಳ್ಳಲು ಓಡುವುದೊಂದೇ ಬಾಕಿ. ನಮ್ಮ ಕಲ್ಪನೆಗಳ ಹಚ್ಚಿಕೊಂಡು ಮುಂದೆ ನಡೆಯಬಹುದಾದ ಘಟನೆಗೆ ಮತ್ತಷ್ಟು ಕಾದೆವು. ಅವುಗಳ ಮೊಗದ ಭಯವೂ ಇಳಿಯಲಿಲ್ಲ. ನಮ್ಮ ನಿರೀಕ್ಷೆಯಂತೆ ಎಲ್ಲವೂ ನಡೆದಿರಬಹುದು. ಆದರೆ ನಿಂತು ನೋಡಿ ಚಿತ್ರೀಕರಿಸಲು ಸಮಯ ಮೀರುತ್ತಿತ್ತು. ಆರೂವರೆಯೊಳಗೆ ಕಾಡಿನಿಂದ ಈಚೆ ಬರಬೇಕೆಂಬ ನಿಯಮಕ್ಕೆ ಬದ್ಧರಾಗಿ ಬೇಸರದಲ್ಲೇ ಹೊರ ಬಂದೆವು. ಹಂದಿಯ ಜೀವ ಉಳಿಯಿತೋ? ಇಲ್ಲವೋ? ಗೊತ್ತಿಲ್ಲ.

ಮೊನ್ನೆ ಕಾಡಿನಲ್ಲಿ ಒಂದು ಅಚ್ಚರಿ ಕಂಡೆ, 'ಅಲ್ಲಿ ಹುಲಿ ಇದೆ, ಹೋಗಿ' ಎಂದು ಆ ಕಡೆಯಿಂದ ಬಂದ ಗೆಳೆಯರು ಹೇಳಿದಾಗ ಸಂತೋಷದಿಂದ ಜೀಪೋಡಿಸಿಕೊಂಡು ಅಲ್ಲಿಗೆ ಹೋದೆವು. ನಾವು ಹೋಗುವಷ್ಟರಲ್ಲಿ ಹುಲಿ ತನ್ನ ಸಣ್ಣ ಸ್ನಾನ ಮುಗಿಸಿ ಮೇಲೆ ಕಾಡಿನಲ್ಲಿ ಹೋಗಿ ಕೂತಿತ್ತು. ಅದು ಇನ್ನೇನು ಹೊರ ಬರಬಹುದು ಎಂದು ಕಾಯ್ತಾ ಕುಳಿತೆವು. ಎದುರಿಗೆ ಒಂದು ಕಾಡೆಮ್ಮೆಗಳ ಗುಂಪು ಮೇಯುತ್ತಾ ಇರುವುದು ಕಾಣುತ್ತಿತ್ತು. ಅವುಗಳಲ್ಲಿ ಕೆಲವು ಸಣ್ಣ ಮರಿಗಳು